1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.14/2023

ದಿಃ 06.10.2023

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-2

| | | |
|---|---|---|
| ಹೆಸರು | ಃ | ರತ್ನಮ್ಮ |
| ಗಂಡನ ಹೆಸರು | ಃ | ಅಂದಾನಿ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ರೇಷ್ಮೆ ಕೂಲಿ |
| ವಾಸಸ್ಥಳ | ಃ | ರಾಜೀವ್ ಗಾಂಧಿಪುರ,ರಾಮನಗರ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ.1 ನನ್ನ ಮಗಳು.

2. ಚಾಸಾ 3 ನನ್ನ ಮಗಳ ಗಂಡ.

3. ನಾವು ಹಿಂದೂ ಆದಿ ಕರ್ನಾಟಕ ಜಾತಿಗೆ ಸೇರಿದವರಾಗಿರುತ್ತೇವೆ.

4. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದು, ನನಗೆ ಗೊತ್ತು.

5. ಅವರಿಗೆ ನಮ್ಮ ಜಾತಿ ಗೊತ್ತು.

6. 1ನೇ ಆರೋಪಿತನ ರೇಷ್ಮೇ ಫ್ಯಾಕ್ಟರಿಯಲ್ಲಿ ಪಿಲೆಚರಿ ಕೆಲಸವನ್ನು ಕಳೆದ 4 ವರ್ಷದಿಂದ ನಾನು ಮತ್ತು ನನ್ನ ಮಗಳು ಮಾಡುತ್ತಿದ್ದೆವು.

7.ಆ ಸಮಯದಲ್ಲಿ ನನ್ನ ಚಿಕ್ಕ ಮಗಳಾದ ಸುಚಿತ್ರ ಇವಳು ಸಹ ಸದರಿ ಕೆಲಸಕ್ಕೆ ಬರುತ್ತಿದ್ದಳು.

8.ಸುಚಿತ್ರ ಇವಳ ವಿವಾಹವಾದ ಮೇಲೆ ಸದರಿ ಕೆಲಸಕ್ಕೆ ಬರುವುದನ್ನು ಬಿಟ್ಟು ಬಿಡುತ್ತಾಳೆ.

9. ನಂತರ ಚಾಸಾ 1 ಇವಳ ವಿವಾಹವಾಗಿ ಗಂಡನ ಮನೆಗೆ ಹೋದ ಮೇಲೆ ಅವರ ಗಂಡನ ಮನೆಯವರು ಸದರಿ ಕೆಲಸವನ್ನು ಬಿಡಿಸಿರುತ್ತಾರೆ.

10.ಆಗ ಚಾಸಾ 1 ಇವಳು ಬೇರೆ ರೇಷ್ಮೇ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು.

11. ಅದಕ್ಕೆ 1ನೇ ಆರೋಪಿತನು ನೀಡಿದ್ದ ಮುಗಂಡ ಹಣ ರೂ. 20 ಸಾವಿರ ರೂಪಾಯಿಗಳನ್ನು ಮರಳಿ ಕೊಡಬೇಕು ಎಂದು ಚಾಸಾ 1 ಇವಳೊಂದಿಗೆ ಗಲಾಟೆ ಮಾಡಿರುತ್ತಾನೆ.

12. ಸದರಿ ಗಲಾಟೆ ಮಾಡಿರುವ ವಿಚಾರವನ್ನು ಚಾಸಾ 1 ಇವಳು ನನಗೆ ನಮ್ಮ ಮನೆಗೆ ಬಂದು ತಿಳಿಸಿರುತ್ತಾಳೆ.

<u>ಪಾಟೀ ಸವಾಲುಃ ಶ್ರೀ.ವಿಎಸ್ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

13. 1ನೇ ಆರೋಪಿತನ ರೇಷ್ಮೇ ಪ್ಯಾಕ್ಟರಿಯಲ್ಲಿ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ನಾವು ಕೆಲಸ ಮಾಡುತ್ತಿದ್ದೆವು ಎಂಬುವುದು ಹೇಳಲು ಬರುವುದಿಲ್ಲ.

14. ಚಾಸಾ 1 ಇವಳು 1ನೇ ಆರೋಪಿತನ ರೇಷ್ಮೇ ಪ್ಯಾಕ್ಟರಿಯಲ್ಲಿ ಕೆಲಸ ಬಿಟ್ಟಿರುತ್ತಾಳೆ ಎಂದು ದಿನಾಂಕವನ್ನು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ.

15. 1ನೇ ಆರೋಪಿತನ ರೇಷ್ಮೇ ಪ್ಯಾಕ್ಟರಿಯಿಂದ ಚಾಸಾ 1 ಇವಳು ಕೆಲಸ ಬಿಟ್ಟ ನಂತರ ಸುಮಾರು 15 ದಿವಸಗಳ ಮೇಲೆ ಬೇರೆ ರೇಷ್ಮೇ ಪ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಳು.

16. ಘಟನೆ ನಡೆದ ದಿನಾಂಕ ನನಗೆ ನೆನಪಿಲ್ಲ.

17. ನಾವು ಆದಿ ಕರ್ನಾಟಕ ಜಾತಿಗೆ ಸೇರಿದವರಾಗಿರುತ್ತೇವೆ ಎಂದು ಆರೋಪಿತರಿಗೆ ಹೇಳಿರಲಿಲ್ಲ ಎಂಬುವುದು ಸರಿ.

18.ನಾವು 20ಸಾವಿರ ರೂಪಾಯಿಗಳನ್ನು 1ನೇ ಆರೋಪಿತನಿಂದ ಪಡೆದುಕೊಂಡಿದ್ದು ಅದನ್ನು ಮರಳಿ ಕೊಡುವುದರಿಂದ ತಪ್ಪಿಸಿಕೊಳ್ಳಲು

ಚಾಸಾ 1 ಇವಳ ಮುಖಾಂತರ ಒಂದು ಸುಳ್ಳು ಪಿರ್ಯಾದನ್ನು ಕೊಡಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

19.1ನೇ ಆರೋಪಿತನ ರೇಷ್ಮೇ ಪ್ಯಾಕ್ಟರಿಯಲ್ಲಿ ಪಿಲೆಚರಿ ಕೆಲಸವನ್ನು ಕಳೆದ 4 ವರ್ಷದಿಂದ ನಾನು ಮತ್ತು ನನ್ನ ಮಗಳು ಮಾಡುತ್ತಿದ್ದೆವು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

20.ಆ ಸಮಯದಲ್ಲಿ ನನ್ನ ಚಿಕ್ಕ ಮಗಳಾದ ಸುಚಿತ್ರ ಇವಳು ಸಹ ಸದರಿ ಕೆಲಸಕ್ಕೆ ಬರುತ್ತಿದ್ದಳು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

21.ಸುಚಿತ್ರ ಇವಳ ವಿವಾಹವಾದ ಮೇಲೆ ಸದರಿ ಕೆಲಸಕ್ಕೆ ಬರುವುದನ್ನು ಬಿಟ್ಟು ಬಿಡುತ್ತಾಳೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

22. ನಂತರ ಚಾಸಾ 1 ಇವಳ ವಿವಾಹವಾಗಿ ಗಂಡನ ಮನೆಗೆ ಹೋದ ಮೇಲೆ ಅವರ ಗಂಡನ ಮನೆಯವರು ಸದರಿ ಕೆಲಸವನ್ನು ಬಿಡಿಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

23.ಆಗ ಚಾಸಾ 1 ಇವಳು ಬೇರೆ ರೇಷ್ಮೇ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24. ಅದಕ್ಕೆ 1ನೇ ಆರೋಪಿತನು ನೀಡಿದ್ದ ಮುಗಂಡ ಹಣ ರೂ. 20 ಸಾವಿರ ರೂಪಾಯಿಗಳನ್ನು ಮರಳಿ ಕೊಡಬೇಕು ಎಂದು ಚಾಸಾ 1 ಇವಳೊಂದಿಗೆ ಗಲಾಟೆ ಮಾಡಿರುತ್ತಾನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

25. ಸದರಿ ಗಲಾಟೆ ಮಾಡಿರುವ ವಿಚಾರವನ್ನು ಚಾಸಾ 1 ಇವಳು ನನಗೆ ನಮ್ಮ ಮನೆಗೆ ಬಂದು ತಿಳಿಸಿರುತ್ತಾಳೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.